ಬರುವ ಮೊದಲೇ ನಾನೇ ಬಂದುಬಿಡುತ್ತೇನೆ. ಇನ್ನೆಂದೂ ಇವುಗಳನ್ನು ಧರಿಸುವುದಿಲ್ಲ.

ಇಂದು ಜೀವನದಲ್ಲಿ ಒಮ್ಮೆ ಮಾತ್ರ ಒಂದೇ ಒಂದು ಸಾರಿ ನನ್ನ ನಿಜವಾದ ರಾಜಕುಮಾರನಿಗಾಗಿ ನಾನು ಸಿಂಗರಿಸಿಕೊಂಡರೆ ಪ್ರಳಯವೇ ಆಗಿಬಿಡುತ್ತದೇನು?... ಹೈ ಹೀಲ್ಡ್ ಚಪ್ಪಲಿ ಧರಿಸಿ ಮನೆಯಿಂದ ಹೊರಟು ಬಿರಬಿರನೆ ಶಾಲೆಗೆ ನಡೆದೆ. ಶಾಲೆಯಲ್ಲಂತು ಎಲ್ಲರಿಗೂ ಆಶ್ಚರ್ಯವೋ ಆಶ್ಚರ್ಯ. ನನ್ನ ತರಗತಿಯ ಮಕ್ಕಳಂತೂ ನನ್ನ ಹತ್ತಿರ ಆಗಾಗ ಬಂದು ಖುಷಿಯಿಂದ "ನಮ್ಮ ಮ್ಯಾಮ್ ಇಂದು ತುಂಬಾ ಸುಂದರವಾಗಿ ಕಾಣ್ತಿದಾರೆ..." ಎನ್ನುತ್ತಿದ್ದಾರೆ. ನನ್ನ ಎದೆಬಡಿತವೇ ನಿಂತಂತೆ ನನಗೆ ಭಾಸವಾಗುತ್ತಿತ್ತು. ಕ್ಷಣಕ್ಷಣವೂ ಉರುಳುತ್ತ ಉರುಳುತ್ತ ಆ ಬಹುಮುಖ್ಯ ಕ್ಷಣ ಬಂದೇಬಿಟ್ಟಿತು.

ತನ್ನ ಸೌಂದರ್ಯದಿಂದ ಕಂಗೊಳಿಸುತ್ತಿದ್ದ ಅವರು ಠೀವಿಯಿಂದ ಡಯಾಸ್ ಮೇಲೆ ಬಂದರು. ಸಮಯ ನಿಂತಂತೆ ಭಾಸವಾಯಿತು... ನನ್ನ ಉಸಿರೂ ಕೂಡ. ಪ್ರಕಾಶವೇ ಎಲ್ಲೆಲ್ಲೂ.

ಬೆಳದಿಂಗಳ ಹಾಲು ಬೆಳಕು... ಹೊಳೆಯುವ ಕಿರಣಗಳ ಪ್ರಕಾಶದೊಂದಿಗೆ ಮುಗುಳ್ನಗು. ಬೆರಗಾಗಿಸುವ ಧ್ವನಿ... ಸುತ್ತಲೂ ಹರಡಿರುವ ವಿವಿಧ ಹೂಗಳ ಪರಿಮಳ... ಮತ್ತುಭರಿಸುವ ವಾತಾವರಣ... ಅವೆಲ್ಲವನ್ನು ಉಡಿಯಲ್ಲಿ ತುಂಬಿಕೊಳ್ಳಲು ಸೆರಗು ಚಾಚುವ ತವಕ ನನಗೆ... ಈ ಎಲ್ಲ ಮೃದು ಕೋಮಲ ಹೂಗಳ ದಿಬ್ಬಣವನ್ನು ಹಿಡಿದಿಟ್ಟುಕೊಳ್ಳಲೇ!...

ಇಲ್ಲ, ಇವುಗಳನ್ನು ಈಗ ನನ್ನ ಸೆರಗಿನಲ್ಲಿ ಬಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ. ಸಮಯ ಸರಿಯತೊಡಗಿತು... ನನ್ನ ಉಸಿರೂ ಸಹ. ಅವರು ವೇದಿಕೆಯಿಂದ ಇಳಿದು ತನ್ನ ಆಫೀಸ್ ಕಡೆಗೆ ಹೋಗುತ್ತಿದ್ದಾರೆ. ಅಲ್ಲಿದ್ದವರ ಇರುವಿಕೆಯನ್ನು ಲೆಕ್ಕಿಸದೆ ನಾನು ಹಿಂದೆ ಹಿಂದೆಯೇ ಅವರ ಆಫೀಸ್‌ನೊಳಗೆ ಪ್ರವೇಶಿಸಿದೆ.

"ಸರ್... ಸರ್!... ನಿಮ್ಮೊಂದಿಗೆ ನಾನು ಸ್ವಲ್ಪ ಮಾತಾಡುವುದಿದೆ."

"ಹಾಂ... ಹೇಳಿ..." ನನ್ನ ಕಡೆ ನೋಡದೆಯೇ ಅವರು ಹೇಳಿದರು.

"ಸರ್, ನನ್ನ ಪತಿ ಹೊರಟುಹೋಗಿ ಏಳುವರ್ಷಗಳಾದವು. ಈ ವಿಚಾರ ಯಾರಿಗೂ ತಿಳಿದಿಲ್ಲ."

"ನನಗೆ ತಿಳಿದಿದೆ..." ಅವರು ಗೋಡೆ ಕಡೆಗೆ ದೃಷ್ಟಿನೆಟ್ಟು ಹೇಳಿದರು...

"ಆಂ... ನೀವು ಬೇರೊಂದು ಮದುವೆ ಮಾಡಿಕೊಳ್ಳಿ..."

"ಯಾರೊಂದಿಗೆ?..." ನಾನು ಉದ್ವೇಗದಿಂದ ಕೇಳಿದೆ.

"ನಿಮಗೆ ಇಷ್ಟವಾಗುವವರೊಂದಿಗೆ" ಇದ್ದಕ್ಕಿದ್ದ ಹಾಗೆ ಅವರು ನನ್ನ ಕಡೆ ತಿರುಗಿದರು... ನನ್ನ ಕಣ್ಣೊಳಗೆ ಇಳಿದು ಇಣುಕಿ ನೋಡಿದರು.

ಅಬ್ಬಾ!... ಎಂತಹ ತೀಕ್ಷ್ಣವಾದ ದೃಷ್ಟಿ. ನನ್ನ ಮೌನವೆಲ್ಲ ಕಣ್ಣುಗುಡ್ಡೆಯೊಳಗೆ ಲೀನವಾಗಿ ಹೋಯಿತು.

"...ನಾನು ಮದುವೆಯಾಗಿದ್ದೇನೆ. ಇನ್ನೊಬ್ಬರೊಂದಿಗೆ ಪ್ರೀತಿ ಹಂಚಿಕೊಳ್ಳಲು ಸಾಧ್ಯವೇ? ಪ್ರೀತಿಸುವುದೇ ಆದಲ್ಲಿ ಮದುವೆಯ ಅವಶ್ಯಕತೆ ಇಲ್ಲ." ನನ್ನ ಕಣ್ಣೊಳಗಿನ ಬಣ್ಣ ಕರಗತೊಡಗಿತು. ಗುಲಾಬಿ ಬಣ್ಣದ ರೇಷ್ಮೆ ಸೀರೆಯ ಸೆರಗಿನಲ್ಲಿ ರಂಧ್ರಗಳಾಗತೊಡಗಿದವು. ಸುತ್ತಲೂ ಕಂಪು ಬೀರುತ್ತಿದ್ದ ಹೂಗಳು ಅಚಾನಕಾಗಿ ಬಾಡತೊಡಗಿದವು.

"...ನನಗೆ ಟ್ರಾನ್ಸ್‌ಫರ್ ಆಗಿದೆ. ಖುದಾಹಾಫಿಜ್!..." ಆಸೆ ಆಕಾಂಕ್ಷೆಗಳೆಲ್ಲ ಘಾಸಿಗೊಂಡವು. ಅವರ ಎತ್ತರದ ಶರೀರದ ಸುತ್ತ ಹರಡಿದ್ದ ಬೆಳ್ಳಿಯ ಕಿರಣಗಳು ನನ್ನೊಳಗೆ ಇಳಿದು ಹೋದವು. ನನ್ನ ಶರೀರ ಪ್ರಾಣಹೀನವಾದಂತಾಗಿ ಈಗಲೋ ಆಗಲೋ ಸಾಯುತ್ತೇನೆ ಅನ್ನಿಸತೊಡಗಿತು. ಉಸಿರು ಒಟ್ಟುಗೂಡಿಸಿ ಹಿಡಿದಿಟ್ಟುಕೊಂಡಾಗ ಕೊನೆಯ ಸಾರಿ ಎಂಬಂತೆ ಹೃದಯ ಢವಗುಟ್ಟಿತು.

ನನ್ನಲ್ಲೆ ಧೈರ್ಯವನ್ನು ಒಟ್ಟುಗೂಡಿಸಿ ನಾನು ನನ್ನ ಬಲಗೈಯನ್ನು ಮುಂದೆ ಚಾಚಿದೆ. ಅವರ ಮತ್ತು